ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
www.anekal.tpa.gov.in, www.e-vinyasa.kar.nic.in

## "ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನಾ ಪತ್ರ"

ಸಂಖ್ಯೆ: ಆಯೋಪ್ರಾ/ಎಲ್ಎಓ/144/2022-23 ದಿನಾಂಕ: 27 MAR 2023

ವಿಷಯ : ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ವಳಗೆರೆಕಲ್ಲಹಳ್ಳಿ ಗ್ರಾಮದ ಸ.ನಂ.39/6ರಲ್ಲಿನ 0-17.08ಗುಂಟೆ ಅಥವಾ 1770.49ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :
1) ಅರ್ಜಿದಾರರಾದ ಶ್ರೀಮತಿ ಸೂರಿನೇನಿ ಶೀಲಾ ಕೋಂ. ಸೂರಿನೇನಿ ಪ್ರಸಾದ್ ನಾಯ್ಡು ರವರು ಸಲ್ಲಿಸಿರುವ ಅರ್ಜಿ ದಿನಾಂಕ:06.02.2023.
2) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನಾ ಪತ್ರ
   i) ಸಂಖ್ಯೆ:ಎಎಲ್ಎನ್(ಎ.ಕೆ.ಎಸ್)ಎಸ್.ಆರ್:08/22-23(333169) ದಿನಾಂಕ:27.04.2022.
3) ದಿನಾಂಕ:09.02.2023ರಂದು ನಡೆದ ಪ್ರಾಧಿಕಾರದ 82ನೇ ಸಭೆಯ ವಿಷಯ ಸಂಖ್ಯೆ:51ರ ನಡಾವಳಿ.
4) ಈ ಪ್ರಾಧಿಕಾರದ ಪತ್ರ ಸಂಖ್ಯೆ: ಆಯೋಪ್ರಾ/ಎಲ್ಎಓ/144/2022-23 ದಿನಾಂಕ:28.02.2023.
5) ಅರ್ಜಿದಾರರು ಪರಿಶೀಲನಾ ಶುಲ್ಕ ರೂ.3,000/-, ಉಸ್ತುವಾರಿ ಶುಲ್ಕ ರೂ.1,000/-, ನಕ್ಷೆಪ್ರತಿ ಶುಲ್ಕ ರೂ.1,000/-, ಕೆರೆ ಪುನರುಜ್ಜೀವನ ಶುಲ್ಕ ರೂ.44,500/-, ನೀರು ಸರಬರಾಜು ಸೆಸ್ ರೂ.7,500/-, ರಿಂಗ್ ರೋಡ್ ಉದ್ದೇಶಕ್ಕೆ ಹೆಚ್ಚುವರಿ ಶುಲ್ಕ ರೂ.7,500/-, ಕೊಳಗೇರಿ ಸುಧಾರಣೆಗಾಗಿ ಸೆಸ್ ರೂ.4,000/- ಮತ್ತು ಸಾಮೂಹಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ ಸ್ಥಾಪಿಸುವ ಉದ್ದೇಶಕ್ಕಾಗಿ ಹೆಚ್ಚುವರಿ ಶುಲ್ಕ ರೂ.35,500/-ಗಳನ್ನು ಪಾವತಿಸಿರುವ ಚಲನ್ ನಂ.928 ದಿನಾಂಕ:02.03.2023.
6) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ, ಇವರ ಪತ್ರ ಸಂಖ್ಯೆ:ಗ್ರಾ.ಪಂ/ಯಮರೆ/119/2022-23 ದಿನಾಂಕ:09.03.2023.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿನ ಅರ್ಜಿಯಲ್ಲಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ವಳಗೆರೆಕಲ್ಲಹಳ್ಳಿ ಗ್ರಾಮದ ಸ.ನಂ.39/6ರಲ್ಲಿನ 0-17.08ಗುಂಟೆ ಅಥವಾ 1770.49ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ "ವಸತಿ" ಉಪಯೋಗದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಲಾಗಿರುತ್ತದೆ.

ಪ್ರಶ್ನಿತ ಪ್ರದೇಶವು ಸರ್ಕಾರದಿಂದ ಅನುಮೋದಿತವಾಗಿರುವ ಮಹಾಯೋಜನೆಯಂತೆ ಕೈಗಾರಿಕಾ ವಲಯದಲ್ಲಿ ಇರುತ್ತದೆ. ಕೈಗಾರಿಕಾ ಉದ್ದೇಶಕ್ಕಾಗಿ ಕಾಯ್ದಿರಿಸಿದ ಭೂ ಉಪಯೋಗದಲ್ಲಿ ಬರುತ್ತಿದ್ದುದರಿಂದ KTCP ಕಾಯ್ದೆ 1961ರ ಕಲಂ 14-ಎ ರಡಿಯಲ್ಲಿ ಪ್ರಾಧಿಕಾರಕ್ಕೆ ನಿಗಧಿತ ಶುಲ್ಕ ಪಾವತಿಸಿ, ಪ್ರಾಧಿಕಾರದ ಪತ್ರ ಸಂಖ್ಯೆ:ಆಯೋಪ್ರಾ/ಭೂ.ಬ/17/2021-22 ದಿನಾಂಕ:08.04.2022ರಂತೆ, ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆಗೆ ಪ್ರಾಧಿಕಾರದಿಂದ ಅನುಮತಿ ಪಡೆದಿರುತ್ತಾರೆ. ಉಲ್ಲೇಖ(2)ರಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರ ಅಧಿಕೃತ ಜ್ಞಾಪನದಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ



B

ಆಗಿರುತ್ತದೆ. ಪ್ರಸ್ತಾವಿತ ಜಮೀನಿಗೆ ವಳಗೆರೆಕಲ್ಲಹಳ್ಳಿಯಿಂದ ಚಂಬೇನಹಳ್ಳಿಗೆ ಹೋಗುವ 9.14ಮೀ. ಅಲಗದ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ.

ಉಲ್ಲೇಖ(3)ರಲ್ಲಿನ ದಿನಾಂಕ:09.02.2023ರಂದು ನಡೆದ ಪ್ರಾಧಿಕಾರದ 82ನೇ ಸಭೆಯ ವಿಷಯ ಸಂಖ್ಯೆ:51ರ ನಡಾವಳಿಯಲ್ಲಿ ಸಲ್ಲಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಪ್ರಸ್ತಾವನೆಯು ವಲಯನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ವಳಗೆರೆಕಲ್ಲಹಳ್ಳಿ ಗ್ರಾಮದ ಸ.ನಂ.39/6ರಲ್ಲಿನ 0–17.08ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಅರ್ಜಿದಾರರಿಂದ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು, ವಸತಿ ಉದ್ದೇಶಕ್ಕೆ ಏಕ ನಿವೇಶನ ನಕ್ಷೆಯನ್ನು ಸಾಮಾನ್ಯ ಷರತ್ತುಗಳೊಂದಿಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಪ್ರಾಧಿಕಾರದ ಸಭೆಯ ತೀರ್ಮಾನದಂತೆ, ಉಲ್ಲೇಖ(4)ರಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ. ಅದರಂತೆ, ಉಲ್ಲೇಖ(5)ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪಾವತಿಸಿರುವ ಚಲನ್ ಹಾಗೂ ನೀಲಿ ನಕ್ಷೆಗಳನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನಿನಲ್ಲಿ ಹಾಲಿ 9.14ಮೀ. ಅಗಲದ ರಸ್ತೆಗಾಗಿ ಕಾಯ್ದಿರಿಸಿರುವ ವಿಸ್ತೀರ್ಣ 204.39ಚ.ಮೀ. ಜಾಗವನ್ನು ಅರ್ಜಿದಾರರು ಉಪನೋಂದಣಾಧಿಕಾರಿಗಳು, ಸರ್ಜಾಪುರ ಇವರ ನೋಂದಣಿ ಸಂಖ್ಯೆ: SRJ-1-10219-2022-23 ದಿನಾಂಕ:09.03.2023ರಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಯಮರೆ ಗ್ರಾಮ ಪಂಚಾಯಿತಿ ರವರಿಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ನೋಂದಾಯಿಸಿ, ಯಮರೆ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿರುವುದಾಗಿ ತಿಳಿಸಿ, ಉಲ್ಲೇಖ(6)ರಲ್ಲಿ ನೋಂದಾಯಿತ ಪರಿತ್ಯಜನಾ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ವಳಗೆರೆಕಲ್ಲಹಳ್ಳಿ ಗ್ರಾಮದ ಸ.ನಂ.39/6ರಲ್ಲಿನ 0–17.08ಗುಂಟೆ ಅಥವಾ 1770.49ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದನೆಯಾಗಿರುವ ವಲಯನಿಯಮಾವಳಿಯಂತೆ "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಅನುಮೋದಿಸಲಾಗಿದೆ.

1. ಪ್ರಸ್ತಾವಿತ ಪ್ರದೇಶವನ್ನು "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸವಾಗಿ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಜನೆ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯನ್ವಯ ಈ ಕಛೇರಿಯ ಪೂರ್ವಾನುಮತಿ ಪಡೆಯತಕ್ಕದ್ದು.
2. ಅನುಮೋದಿತ 'ಏಕ ನಿವೇಶನ' ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
3. ವಿನ್ಯಾಸದಲ್ಲಿ "ವಸತಿ" ಕಟ್ಟಡ ನಿರ್ಮಾಣ ಪ್ರಾರಂಭಿಸುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 15 (1) ರಂತೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
4. "ವಸತಿ" ಕಟ್ಟಡ ಇತ್ಯಾದಿ ಕಾಮಗಾರಿಯನ್ನು ಕೈಗೊಳ್ಳುವ ಮೊದಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ, ರವರಿಂದ ಪರವಾನಗಿ (ಲೈಸೆನ್ಸ್) ಅನ್ನು ಪಡೆಯತಕ್ಕದ್ದು.
5. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
7. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Footpath) ನಿರ್ಮಿಸುವುದು.

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
www.anekal.tpa.gov.in, www.e-vinyasa.kar.nic.in

8. ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಆಗುವ ಅನಾನುಕೂಲಗಳ ಬಗ್ಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
9. ನಿಯಮಾವಳಿಯಂತೆ ಅವಶ್ಯಕವಿರುವ ಇತರೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ನಿಬಂಧನೆಗೊಳಪಟ್ಟಿರುತ್ತದೆ.
10. ಅಗತ್ಯ ಅಭಿವೃದ್ಧಿ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸ್ಥಳೀಯ ಸಂಸ್ಥೆಯಾದ ಯಮರೆ ಗ್ರಾಮ ಪಂಚಾಯಿತಿ, ಇವರಿಗೆ ತಪ್ಪದೇ ಪಾವತಿಸತಕ್ಕದ್ದು.
11. "ವಸತಿ" ಉದ್ದೇಶದ 'ಏಕ ನಿವೇಶನ' ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂಮಾಲೀಕತ್ವ ದಾಖಲೆ ಮತ್ತು ಇತರೆ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು.
12. ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿನ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.
13. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಪ್ರಾಧಿಕಾರವು ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಮೇಲಿನಂತೆ ನೀಡಲಾಗಿರುವ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಂತೆ ಕ್ರಮ ಕೈಗೊಳ್ಳಲಾಗುವುದು.

27.3.23


ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

**ಇವರಿಗೆ,**
**ಶ್ರೀಮತಿ ಸೂರಿನೇನಿ ಶೀಲಾ ಕೋಂ. ಸೂರಿನೇನಿ ಪ್ರಸಾದ್‌ನಾಯ್ಡು,**
ಫ್ಲಾಟ್ ನಂ.401, ARS Greenshinre, Trinity Complex,
ಸರ್ಜಾಪುರ ಮುಖ್ಯರಸ್ತೆ, ಸೋಂಪುರ ಗ್ರಾಮ,
ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ.


*ಪ್ರತಿಯನ್ನು :-*

1. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,** ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು. ರವರಿಗೆ ಅನುಮೋದಿತ **"ವಸತಿ"** ಉದ್ದೇಶದ 'ಏಕ ನಿವೇಶನ' ವಿನ್ಯಾಸ ನಕ್ಷೆಯ ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. **ಕಛೇರಿ ಪ್ರತಿ.**
3. **ಹೆಚ್ಚುವರಿ ಪ್ರತಿ.**


B




LOCATION MAP :




AREA STATEMENT

| SL.NO | VILLAGE | SY.NO | AREA IN | | B KHARAB GUNTAS | BALANCE AREA | |
|---|---|---|---|---|---|---|---|
| | | | ACRE | GUNTAS | | ACRE | GUNTAS |
| 1 | V KALLAHALLI | 39/6 | 00 | 17.08 | 00 | 00 | 17.08 |
| | | | | | TOTAL | 00 | 17.08 |

SITE AREA = 1,770.47 SQM

LAND USE ANALYSIS
TOTAL AREA - 0ACRES 17.08 GUNTAS OR (1770.47 Sqm)

| LAND USE | AREA IN SQ.M | % |
|---|---|---|
| RESIDENTIAL | 1,566.08 | 88.46 |
| ROAD | 204.39 | 11.54 |
| TOTAL | 1,770.47 | 100.00 |

CONVERSION ORDER NO :
ALN(AKS)SR 08/2022-23

TITLE :-

**PROPOSED RESIDENTIAL SINGLE SITE PLAN IN SYNO:39/6 ,**
**MEASURING 0A- 17.05G,**
**AT V.KALLAHALLI VILLAGE,**
**SARJAPURA HOBLI,**
**ANEKAL TALUK, BANGALORE.**

OWNER:-

S. Sheela

Mr. SURINENI SHEELA

ENGINEER:-

B.V. P.

(PRAVEEN B.V)
Reg.No : BCC/BL-3.6/E:3957:2014-15.

OFFICE USE : -

ಪ್ರಾಧಿಕಾರದ ದಿನಾಂಕ 09.02.23ರ 83 ನೇ
ಸಭೆಯ ವಿಷಯ ಸಂಖ್ಯೆ 51 ರಲ್ಲಿ ತೆಗೆದುಕೊಂಡ
ನಿರ್ಣಯಕ್ಕನುಸಾರ, ಹಾಗೂ ಪತ್ರ ಸಂಖ್ಯೆ
ಆಯೋ ALO/144/22.23 ದಿನಾಂಕ 27/03/23ರಲ್ಲಿನ
ನಿಬಂಧನೆಗೊಳಪಡಿಸಿ ನಕ್ಷೆ ಅನುಮೋದಿಸಲಾಗಿದೆ.

27.3.23
ಸದಸ್ಯ- ಕಾರ್ಯದರ್ಶಿ
ಆನೇಕಲ್ ಯೋಜನಾ ಪ್ರಾಧಿಕಾರ
ಆನೇಕಲ್.

ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ

ನಗರ ಮತ್ತು ಗ್ರಾಮಾಂತರ ಯೋಜನಾ
ಉಪ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ
ಆನೇಕಲ್